**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 11 ಫ್ರಾ.ಸಾ. : 9**

| | |
|---|---|
| ಸಾಕ್ಷಿಯ ಹೆಸರು | : ಮಂಜುನಾಥ |
| ತಂದೆಯ ಹೆಸರು | : ನಿಂಗಪ್ಪ ಪಟಗಾರ |
| ವಯಸ್ಸು | : 47 ವರ್ಷ |
| ಉದ್ಯೋಗ | : ಎಚ್ ಸಿ 1421 |
| ವಾಸ | : ಭಟ್ಕಳ ಗ್ರಾಮೀಣ ಠಾಣೆ |

**ದಿನಾಂಕಃ 08-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 2012 ರಿಂದ 2015 ರವರೆಗೆ ಆರಕ್ಷಕ ಪೇದೆಯಾಗಿ ಲೋಕಾಯುಕ್ತ ಠಾಣೆ ಕಾರವಾರದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 16.09.2013 ರಂದು ಫಿರ್ಯಾದಿ ರಾಮಾ ಬೀರಪ್ಪ ನಾಯ್ಕ ಬಾಡರವರು ಲೋಕಾಯುಕ್ತ ಕಚೇರಿಗೆ ಬಂದು ಒಂದು ಫಿರ್ಯಾದನ್ನು ಆರಕ್ಷಕ ಉಪಾಧೀಕ್ಷಕರಿಗೆ ನೀಡಿದರು. ಅದರಂತೆ ಆರಕ್ಷಕ ಉಪಾಧೀಕ್ಷಕರು ಫಿರ್ಯಾದಿಯವರ ಫಿರ್ಯಾದನ್ನು ಪಡೆದುಕೊಂಡು ಲೋಕಾಯುಕ್ತ ಠಾಣಾ ಗುನ್ನಾ ಸಂ. 5/2013 ಕಲಂ 7, 13(1)(ಡಿ), 13(2) ಪಿ ಸಿ ಕಾಯ್ದೆಯಂತೆ ಪ್ರಕರಣವನ್ನು ದಾಖಲಿಸಿಕೊಂಡರು. ಪ್ರಥಮ ವರ್ತಮಾನ ವರದಿಯನ್ನು ಚಾಸಾ-7 ರವರ ಮುಖಾಂತರ ನ್ಯಾಯಾಲಯಕ್ಕೆ ನಿವೇದಿಸಿಕೊಂಡರು. ನಂತರ ಫ್ರಾಯೋಗಿಕ ಪಂಚನಾಮೆಯ ಕುರಿತು ಪಂಚರನ್ನು ಕರೆಸಿದರು. ಸಂಜೆ 15.00 ಗಂಟೆಗೆ ಆರಕ್ಷಕ ಉಪಾಧೀಕ್ಷಕರ ಸಮ್ಮುಖದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು ಫ್ರಾಯೋಗಿಕ ಪಂಚನಾಮೆ ಮಾಡಿಕೊಳ್ಳುವಂತೆ ಹೇಳಿದರು . ಅದಕ್ಕೆ ಪಂಚರು ಒಪ್ಪಿಕೊಂಡರು . ಪಂಚ-1 ಎಂದು ಚಾಸಾ-2 ರವರನ್ನು ಹಾಗೂ ಪಂಚ-2 ಎಂದು ಚಾಸಾ-3 ರವರನ್ನು ನೇಮಿಸಿದರು . ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಫಿರ್ಯಾದಿಯು ತಂದು ಹಾಜರುಪಡಿಸಿದ ಹಣವನ್ನು ಆರಕ್ಷಕ ಉಪಾಧೀಕ್ಷಕರಿಗೆ ತೋರಿಸಿದರು. ಅದರಲ್ಲಿ ರೂ. 1000/- ದ 2 ನೋಟುಗಳು ಹಾಗೂ ರೂ. 500/- ರ 2 ನೋಟುಗಳು ಇದ್ದವು . ಅದನ್ನು ಪಂಚ-1 ರವರು ಎಣಿಸಿದರು. ಅದು

ರೂ. 3000/- ಇದ್ದ ಬಗ್ಗೆ ತಿಳಿಸಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಚಾಸಾ-6 ರವರು ಫಿನಾಪ್ತಲಿನ್ ಪುಡಿಯನ್ನು ಸದರಿ ನೋಟಿನ ಎರಡೂ ಭಾಗಕ್ಕೆ ಸವರಿದರು. ನಂತರ ಆಗ ಉಪಯೋಗಿಸಿದ ಫಿನಾಪ್ತಲಿನ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಒಂದು ಲಕೋಟೆಯಲ್ಲಿ ಸಂಗ್ರಹಿಸಿದರು. ಅದಕ್ಕೆ ಅರಗಿನಿಂದ ಸೀಲ್ ಮಾಡಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 1 ಎಂದು ಗುರುತಿಸಿದರು. ನಂತರ ಭಟ್ಟೆ ಇಳಿಸಿದ ನೀರನ್ನು ಮಾದರಿಗಾಗಿ ತೆಗೆದು ಅದನ್ನು ಕ್ವಾರ್ಟರ್ ಬಾಟಲಿಯಲ್ಲಿ ಹಾಕಿ ಸೀಲ್ ಮಾಡಿ ಎ ಎಂಬ ಆಂಗ್ಲ ಅಕ್ಷರದಿಂದ ಮೊಹರು ಹಾಕಿ ವಸ್ತು ಸಂ. 2 ಎಂದು ಗುರುತಿಸಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಚಾಸಾ-8 ರವರು ಒಂದು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರನ್ನು ಹಾಕಿ ಎರಡು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಅದಕ್ಕೆ ಬೆರೆಸಿದರು. ಸೋಡಿಯಂ ಕಾರ್ಬೋನೇಟ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ತೆಗೆದು ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 3 ಎಂದು ಗುರುತಿಸಿದರು. ಸೋಡಿಯಂ ಕಾರ್ಬೋನೇಟ್ ಹಾಗೂ ಭಟ್ಟಿ ಇಳಿಸಿದ ನೀರಿನ್ನು ಮಿಶ್ರಣ ಮಾಡಿದ ದ್ರಾವಣದಿಂದ ಮಾದರಿಯನ್ನು ಕ್ವಾರ್ಟರ್ ಬಾಟಲಿಯಲ್ಲಿ ಸಂಗ್ರಹಿಸಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 4 ಎಂದು ಗುರುತಿಸಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಪಂಚ-1 ರವರು ನೋಟನ್ನು ಎಣಿಸಿದ ಎರಡೂ ಕೈ ಯನ್ನು ಈಗಾಗಲೇ ತಯಾರು ಮಾಡಿದ ಪಿಂಗಾಣಿ ಬಟ್ಟಲಿನಲ್ಲಿ ಕೈಯನ್ನು ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು . ಮೊದಲು ಅದು ತಿಳಿ ನೀರಿನ ರೀತಿ ಇತ್ತು . ಬಣ್ಣ ಪರಿವರ್ತನೆಯಾದ ದ್ರಾವಣವನ್ನು ಒಂದು ಕ್ವಾರ್ಟರ್ ಬಾಟಲಿಗೆ ಹಾಕಿ ಸಂಗ್ರಹಿಸಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ವಸ್ತು ಸಂ. 5 ಎಂದು ಗುರುತಿಸಿದರು. ಈ ರೀತಿ ಬಣ್ಣ ಪರಿವರ್ತನೆಯಾದ ಬಗ್ಗೆ ಪಂಚರಿಗೆ ಹಾಗೂ ಫಿರ್ಯಾದಿಗೆ ತಿಳಿಸಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಈ ರೀತಿ ಬಣ್ಣ ಪರಿವರ್ತನೆಯಾದ ಬಗ್ಗೆ ತಿಳಿಸಿದ ನಂತರ ನೋಟನ್ನು ಒಂದು ಕವರಿನಲ್ಲಿ ಹಾಕಿ ಫಿರ್ಯಾದಿಯ ಎಡ ಕಿಸೆಯಲ್ಲಿ ಪಂಚ-1 ರವರು ಇರಿಸಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆ ನೋಟುಗಳನ್ನು ಆರೋಪಿಗೆ ಕೊಡುವಾಗ ಅಥವಾ ಅಲ್ಲಿ ಇಡು ಎಂದಾಗ ಮಾತ್ರ ಅದನ್ನು ಮುಟ್ಟಬೇಕು ಪದೇ ಪದೇ ಅದನ್ನು ಮುಟ್ಟಬಾರದಾಗಿ ಫಿರ್ಯಾದಿಗೆ ಸೂಚಿಸಿದರು. ನಂತರ

ಆರಕ್ಷಕ ಉಪಾಧೀಕ್ಷಕರು ವಸ್ತು ಸಂ. 1 ರಿಂದ 5 ನೇದವುಗಳನ್ನು ಮಾದರಿಗಾಗಿ ಠಾಣೆಯ ಕಪಾಟಿನಲ್ಲಿ ಯೋಗ್ಯವಾಗಿ ಭದ್ರವಾಗಿ ಇರಿಸಿದರು. ಈ ಪ್ರಾಯೋಗಿಕ ಪಂಚನಾಮೆಯನ್ನು ಆ ದಿನ 15.00 ಗಂಟೆಯಿಂದ 16.30 ವರೆಗೆ ಲ್ಯಾಪಟಾಪ್ ನಲ್ಲಿ ಚಾಸಾ-9 ರವರು ಬೆರಳಚ್ಚು ಮಾಡಿದರು. ನಂತರ ಈ ಎಲ್ಲಾ ಪ್ರಾಯೋಗಿಕ ಪಂಚನಾಮೆಯ ಛಾಯಾಚಿತ್ರಗಳನ್ನು ಚಾಸಾ-10 ರವರ ಮೂಲಕ ತೆಗೆಸಿದರು. ನಂತರ 16.30 ಗಂಟೆಗೆ ಆರಕ್ಷಕ ಉಪಾಧೀಕ್ಷಕರು ಹಾಗೂ ಅಧಿಕಾರಿಗಳು , ಪಂಚರು, ನಾನು ಹಾಗೂ ಇತರ ಸಿಬ್ಬಂದಿಗಳ ಎರಡು ಇಲಾಖಾ ವಾಹನದಲ್ಲಿ ಆರೋಪಿ ಇರುವ ಕುಮಟಾಕ್ಕೆ ಹೊರಟೆವು . ಸಲಕರಣೆಗಳೊಂದಿಗೆ ಹೊರಟೆವು . ಕುಮಟಾ ಪಟ್ಟಣಕ್ಕೆ 18.00 ಗಂಟೆಗೆ ತಲಪಿದೆವು . ನಂತರ ಫಿರ್ಯಾದಿಯವರು ಆರೋಪಿಗೆ ತಮ್ಮ ಮೊಬೈಲ್ ನಿಂದ ಫೋನ್ ಮಾಡಿದರು . ಆರೋಪಿಯು ತಾನು ತಾಲೂಕು ಪಂಚಾಯತಿ ಕುಮಟಾದಲ್ಲಿ ಇರುವುದಾಗಿ ಆಗ ಫಿರ್ಯಾದಿಗೆ ಹೇಳಿದ . ಅದನ್ನು ಫಿರ್ಯಾದಿ ತನಿಖಾಧಿಕಾರಿಗೆ ತಿಳಿಸಿದರು. ನಂತರ 18.15 ಗಂಟೆಗೆ ಗಿಬ್ಸ್ ವೃತ್ತದ ಬಳಿ ಬಂದು ಆರಕ್ಷಕ ಉಪಾಧೀಕ್ಷಕರು ಪಂಚ-1 ಹಾಗೂ ಫಿರ್ಯಾದಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ತಿಳಿಸಿದ ಸೂಚನೆಗಳನ್ನು ಮತ್ತೊಮ್ಮೆ ತಿಳಿಸಿದರು. ವಾಯ್ಸು ರೆಕಾರ್ಡ್ ಮಾಡಬೇಕು ಹಾಗೂ ಫಿನಾಪ್ತಲೀನ್ ಪುಡಿ ಸವರಿದ ನೋಟುಗಳನ್ನು ಆರೋಪಿ ಕೇಳಿದಾಗ ಕೊಡಬೇಕು ಅಥವಾ ಆರೋಪಿ ಇಡು ಎಂದಲ್ಲಿ ಇಡಬೇಕು ಎಂದು ಫಿರ್ಯಾದಿ ಹಾಗೂ ಪಂಚ-1 ರವರಿಗೆ ಆರಕ್ಷಕ ಉಪಾಧೀಕ್ಷಕರು ತಿಳಿಸಿದರು. ಫಿರ್ಯಾದಿಯು ಆರೋಪಿಯು ಬೇಡಿಕೆ ಇಟ್ಟ ಹಣವನ್ನು ಪಡೆದಾಗ ಹೊರಗೆ ಬಂದು ಸನ್ನೆ ಮೂಲಕ ತಿಳಿಸಬೇಕು ಎಂದು ಸೂಚಿಸಿದರು. ನಂತರ ಫಿರ್ಯಾದಿ ಹಾಗೂ ಪಂಚ-1 ರವರು ಆರೋಪಿ ಇರುವ ತಾಲೂಕು ಪಂಚಾಯತಿ ಕುಮಟಾ ಕಚೇರಿ ಒಳಗಡೆ ಹೋಗಿದ್ದು ನಾನು, ಆರಕ್ಷಕ ಉಪಾಧೀಕ್ಷಕರು ಹಾಗೂ ಪಂಚ-2 ರವರು ತಾಲೂಕು ಪಂಚಾಯತಿ ಎದುರಿಗೆ ಇರುವ ಉತ್ತರ ದಿಕ್ಕಿಗೆ ನಿಂತುಕೊಂಡೆವು . A1 Xerox ಹತ್ತಿರ ಚಾಸಾ-8 ಮತ್ತು 10 ನಿಂತರು. ನಾನು, ಚಾಸಾ-7, 9 ತಾಲೂಕು ಪಂಚಾಯತಿಯ ಬಲಗಡೆ ಇರುವ ಪೂರ್ವ ದಿಕ್ಕಿನ ಕಂಪೌಂಡ್ ಹತ್ತಿರ ನಿಂತುಕೊಂಡೆವು . ಒಳಗಡೆ ಹೋದ ಫಿರ್ಯಾದಿಯವರ ಸನ್ನೆಗಾಗಿ ಕಾಯುತ್ತಿದ್ದಾಗ ಆರಕ್ಷಕ ಉಪಾಧೀಕ್ಷಕರು ಫಿರ್ಯಾದಿಯವರು 18.30 ಗಂಟೆಗೆ ಹೊರಗಡೆ ಬಂದು ಸನ್ನೆ ಮಾಡಿ ತಿಳಿಸಿದ . ಆಗ ನಾವೆಲ್ಲರೂ ಹೋಗಿ ನೋಡಿದೆವು. ಫಿರ್ಯಾದಿ ಹಾಗೂ

ಪಂಚ–1 ರವರು ಆರೋಪಿ ಹೊರಗಡೆ ಓಡಿ ಹೋದ ಎಂದು ತಿಳಿಸಿದರು. ನಾವೆಲ್ಲಾ ಕುಮಟಾ ಪಟ್ಟಣದಲ್ಲಿ ಆರೋಪಿಗಾಗಿ ಹುಡುಕಾಡಿದೆವು . ನಂತರ ಹೆರವಟ್ಟಾ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಆರೋಪಿ ಬೈಕ್ ನಲ್ಲಿ ಹೋಗುತ್ತಿರುವಾಗ ಫಿರ್ಯಾದಿ ಇವನೇ ಆರೋಪಿ ಎಂದು ಆರಕ್ಷಕ ಉಪಾಧೀಕ್ಷಕರಿಗೆ ತಿಳಿಸಿದಾಗ ಕೂಡಲೇ ಆರೋಪಿಯು ತನ್ನ ಕಿಸೆಯಲ್ಲಿದ್ದ ಹಣವನ್ನು ಪಕ್ಕದ ಗಿಡಗಂಟಿಗಳ ಹತ್ತಿರ ಬಿಸಾಡಿ ಹೋಗುತ್ತಿರುವಾಗ ಆರಕ್ಷಕ ಉಪಾಧೀಕ್ಷಕರು ಸಿಬ್ಬಂದಿಗಳಿಗೆ ಆರೋಪಿಯನ್ನು ಹಿಡಿಯಲು ತಿಳಿಸಿದರು. ಆಗ ಚಾಸಾ–7 ಮತ್ತು 9 ರವರು ಆರೋಪಿಯನ್ನು ಇಲಾಖಾ ವಾಹನದಲ್ಲಿ ಬೆನ್ನಟ್ಟಿ ಹೋಗಿ ಹೆರವಟ್ಟಾದ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಹತ್ತಿರ ರಸ್ತೆಯಲ್ಲಿ ಆರೋಪಿಯನ್ನು ಹಿಡಿದರು. ಆಗ ಫಿರ್ಯಾದಿ ಆಪಾದಿತ ವ್ಯಕ್ತಿ ಇವನೇ ಎಂದು ಆರೋಪಿಯನ್ನು ತೋರಿಸಿದರು. ಆಗ ನಾನೂ ಸಹ ಅದೇ ಇಲಾಖಾ ವಾಹನದಲ್ಲಿ ಇದ್ದೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಅದೇ ಆರೋಪಿಯಾಗಿದ್ದಾನೆ. ಆಗ ಆರೋಪಿಯ ಎರಡೂ ಕೈಗಳನ್ನು ಚಾಸಾ–7 ಮತ್ತು 9 ರವರು ಹಿಡಿದುಕೊಂಡರು. ನಂತರ ಆರಕ್ಷಕ ಉಪಾಧೀಕ್ಷಕರು ತಮ್ಮ ಗುರುತಿನ ಚೀಟಿಯನ್ನು ತೋರಿಸಿ ತಮ್ಮ ಪದನಾಮ ಮತ್ತು ಇಲಾಖೆಯ ವಿವರವನ್ನು  ಹೇಳಿದರು. ನಂತರ 20.40 ಗಂಟೆಗೆ ಆರೋಪಿಯನ್ನು ದಸ್ತಗಿರಿ ಮಾಡಿ ಆರಕ್ಷಕ ಉಪಾಧೀಕ್ಷಕರು ತಮ್ಮ ವಶಕ್ಕೆ ತೆಗೆದುಕೊಂಡರು. ಹಣವನ್ನು ಎಸೆದಿದ್ದ ಗಿಡಗಂಟಿಯ ಜಾಗ ಆರೋಪಿಯನ್ನು ಹಿಡಿದ ಸ್ಥಳದಿಂದ ಸುಮಾರು 50 ಮೀಟರ್ ದೂರದಲ್ಲಿ ಇತ್ತು. ಆರಕ್ಷಕ ಉಪಾಧೀಕ್ಷಕರವರ ಸೂಚನೆ ಮೇರೆಗೆ ಅವರೊಂದಿಗೆ ಹೋಗಿ ಪಂಚ–1 ನೇಯವರು ಆ ಹಣವನ್ನು ಎಣಿಸಿದರು. ಅದನ್ನು ನಾನು ನೋಡಿರುತ್ತೇನೆ. ಆಗ ನಾನೂ ವಾಹನದಿಂದ ಎಲ್ಲರೊಟ್ಟಿಗೆ ಇಳಿದಿದ್ದೆ. ಆ ಹಣದಲ್ಲಿ ರೂ. 1,000/– ದ ಎರಡು ನೋಟು ಮತ್ತು ರೂ. 500/– ರ 2 ನೋಟುಗಳು ಇದ್ದವು . ಆ ನೋಟುಗಳ ಸಂಖ್ಯೆ ಪ್ರಾಯೋಗಿಕ ಪಂಚನಾಮೆಯಲ್ಲಿ ಇರುವ ನೋಟುಗಳ ಸಂಖ್ಯೆಗಳೊಂದಿಗೆ ತಾಳೆಯಾದವು . ಆ ನೋಟುಗಳನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ ಅದಕ್ಕೆ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದಿಂದ ಮೊಹರು ಮಾಡಿ ವಸ್ತು ಸಂ. 6 ಎಂದು ಗುರುತಿಸಿದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಅಲ್ಲಿ ಬೆಳಕಿನ ಅಭಾವ ಇದ್ದದ್ದರಿಂದ ಹತ್ತಿರದ ಪ್ರವಾಸಿ ಮಂದಿರಕ್ಕೆ

ಬಂದು ಪಂಚನಾಮೆಯನ್ನು ಮಾಡಲು ನಮ್ಮನ್ನೆಲ್ಲಾ ಕರೆದುಕೊಂಡು ಹೋದರು. ಆರೋಪಿಯ ಮೋಟಾರ್ ಸೈಕಲ್ ಅನ್ನು ಚಾಸಾ-10 ರವರು ಪ್ರವಾಸಿ ಮಂದಿರದ ಬಳಿ ತಂದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ಆರೋಪಿಯ ಎರಡೂ ಕೈಗಳನ್ನು ಚಾಸಾ-7 ಮತ್ತು 9 ರವರು ಹಿಡಿದುಕೊಂಡು ಅಲ್ಲಿಗೆ ನಮ್ಮ ಒಟ್ಟಿಗೆ ಕರೆ ತಂದರು. ನಂತರ ಆರಕ್ಷಕ ಉಪಾಧೀಕ್ಷಕರ ಆದೇಶದಂತೆ ನಾನು ಎರಡು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರು ಹಾಗೂ ಒಂದೊಂದು ಚಮಚ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಹಾಕಿ ದ್ರಾವಣವನ್ನು ತಯಾರಿಸಿದೆವು . ಆಗ ಆ ದ್ರಾವಣ ತಿಳಿ ನೀರಿನ ಬಣ್ಣದ್ದಾಗಿತ್ತು . ನಂತರ ಆರೋಪಿಯ ಬಲಗೈ ಬೆರಳುಗಳನ್ನು ಒಂದು ಬಟ್ಟಲಿನಲ್ಲಿ ಇದ್ದ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ನಂತರ ಅದನ್ನು ಎರಡು ಕ್ವಾರ್ಟರ್ ಬಾಟಲಿಯಲ್ಲಿ ಆ ದ್ರಾವಣವನ್ನು ಸಂಗ್ರಹಿಸಿ ಬಟ್ಟೆ ಕಟ್ಟಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ಸೀಲ್ ಮಾಡಿ ಅದಕ್ಕೆ ಪಂಚರ ಹಾಗೂ ತನಿಖಾಧಿಕಾರಿಯವರ ವಿವರವನ್ನು ಬರೆದು ವಸ್ತು ಸಂ. 7 ಮತ್ತು 7 ಎ ಎಂದು ಗುರುತಿಸಿದರು. ನಂತರ ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಆರೋಪಿಯ ಎಡಗೈ ಬೆರಳುಗಳನ್ನು ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಅದನ್ನೂ ಸಹ ಎರಡು ಕ್ವಾರ್ಟರ್ ಬಾಟಲಿಯಲ್ಲಿ ಆ ದ್ರಾವಣವನ್ನು ಸಂಗ್ರಹಿಸಿ ಬಟ್ಟೆ ಕಟ್ಟಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ಸೀಲ್ ಮಾಡಿ ಅದಕ್ಕೆ ಪಂಚರ ಹಾಗೂ ತನಿಖಾಧಿಕಾರಿಯವರ ವಿವರವನ್ನು ಬರೆದು ವಸ್ತು ಸಂ. 8 ಮತ್ತು 8 ಎ ಎಂದು ಗುರುತಿಸಿದರು. ನಂತರ ಆರೋಪಿಯು ಹಣವನ್ನು ತನ್ನ ಪ್ಯಾಂಟಿನ ಬಲಕಿಸೆಯಲ್ಲಿ ಹಾಕಿದ್ದು ಆರೋಪಿಯ ಪ್ಯಾಂಟ್ ನ್ನು ಬದಲಾಯಿಸಲು ಆರೋಪಿಯ ಸಂಬಂಧಿಯಾದ ಶ್ರೀ ವಿಠ್ಠು ನಾಯ್ಕುನನ್ನು ಕರೆಯಿಸಿ ಆರೋಪಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿಸಿ ಆರೋಪಿ ಧರಿಸಿದ್ದ ಪ್ಯಾಂಟಿನ ಬಲಕಿಸೆಯ ಒಳಭಾಗವನ್ನು ಮತ್ತೊಂದು ಪಿಂಗಾಣಿ ಬಟ್ಟಲಿನಲ್ಲಿ ಭಟ್ಟಿ ಇಳಿಸಿದ ನೀರು ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿ ಹಾಕಿ ದ್ರಾವಣ ತಯಾರಿಸಿ ಅದರಲ್ಲಿ ಆ ಕಿಸೆಯನ್ನು ಅದ್ದಿಸಿ ತೊಳೆದಾಗ ಅದು ಸ್ವಲ್ಪ ತಿಳಿ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು . ಅದನ್ನೂ ಸಹ ಎರಡು ಕ್ವಾರ್ಟರ್ ಬಾಟಲಿಯಲ್ಲಿ ಆ ದ್ರಾವಣವನ್ನು ಸಂಗ್ರಹಿಸಿ ಬಟ್ಟೆ ಕಟ್ಟಿ ಅರಗು ಹಾಕಿ ಎ ಎಂಬ ಆಂಗ್ಲ ಅಕ್ಷರದ ಮೊಹರು ಹಾಕಿ ಸೀಲ್ ಮಾಡಿ ಅದಕ್ಕೆ ಪಂಚರ ಹಾಗೂ

ತನಿಖಾಧಿಕಾರಿಯವರ ವಿವರವನ್ನು ಬರೆದು ವಸ್ತು ಸಂ. 9 ಮತ್ತು 9 ಎ ಎಂದು ಗುರುತಿಸಿದರು. ಅವುಗಳಿಗೆಲ್ಲಾ ಪಂಚ ಹಾಗೂ ತನಿಖಾಧಿಕಾರಿಯವರ ಸಹಿ ಹಾಗೂ ವಿವರವನ್ನು ನಮೂದಿಸಿದ ಚೀಟಿಯನ್ನು ಅಂಟಿಸಿದರು. ಆ ಎಲ್ಲಾ ವಸ್ತುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ನಾನು ಆಗ ಜಪ್ತು ಮಾಡಿದ ಹಣವನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಆರೋಪಿಯನ್ನು ವಿಚಾರಣೆ ಮಾಡಿದರು. ಆಗ ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯನ್ನು ಬರೆದುಕೊಟ್ಟ . ತನಿಖಾಧಿಕಾರಿ ಎಂದರೆ ಆರಕ್ಷಕ ಉಪಾಧೀಕ್ಷಕರು ಆಗ ಫಿರ್ಯಾದಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ. ಆರೋಪಿಯ ಮೋಟಾರ್ ಸೈಕಲ್ ನಲ್ಲಿ ಆ ದಾಖಲಾತಿಗಳು ಇದ್ದವು. ನಂತರ ಫಿರ್ಯಾದಿ ಹತ್ತಿರ ನೀಡಿದ್ದ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಸಂಭಾಷಣೆಯನ್ನು ಕೇಳಿದಾಗ ಅದು ಅಸ್ಪಷ್ಟವಾಗಿತ್ತು . ಕಚ್ಚಾ ನಕಾಶೆಯನ್ನು ಮಾಡಿದರು. ಈ ಎಲ್ಲಾ ಘಟನಾವಳಿಗಳನ್ನು ಚಾಸಾ-9 ರವರು ಆರಕ್ಷಕ ಉಪಾಧೀಕ್ಷಕರ ಉಕ್ತ ಲೇಖನಕ್ಕೆ ಲ್ಯಾಪಟಾಪ್ ನಲ್ಲಿ ಬೆರಳಚ್ಚು ಮಾಡಿದರು. ಚಾಸಾ-10 ಆ ಸಮಯದಲ್ಲಿ ಛಾಯಾಚಿತ್ರ ತೆಗೆದರು. ಕಚ್ಚಾ ನಕಾಶೆ ಯಾರು ತಯಾರಿಸಿದರು ಎಂದು ನೆನಪಿಲ್ಲ. ಆ ದಿನ ರಾತ್ರಿ 1.10 ಗಂಟೆಗೆ ಪಂಚನಾಮೆ ಪ್ರಕ್ರಿಯೆಯನ್ನು ಪ್ರವಾಸಿ ಮಂದಿರದಲ್ಲಿ ಮುಕ್ತಾಯ ಮಾಡಿದರು. ಕಾರವಾರ ಲೋಕಾಯುಕ್ತ ಠಾಣೆಗೆ ವಾಪಸ್ಸು ಬಂದೆವು . ಅದರ ನಿಖರ ಸಮಯ ಗೊತ್ತಿರುವುದಿಲ್ಲ.

2. ಈಗ ನ್ಯಾಯಾಲಯದ ಮುಂದೆ ಜಪ್ತು ಮಾಡಿದ ವಸ್ತುಗಳನ್ನು ನೋಡಿರುತ್ತೇನೆ. ಅವುಗಳು ಮಾದರಿ ಫಿನಾಪ್ತಲಿನ್ ಪುಡಿ, ಮಾದರಿ ಭಟ್ಟಿ ಇಳಿಸಿದ ನೀರು, ಮಾದರಿ ಸೋಡಿಯಂ ಕಾರ್ಬೋನೇಟ್ ಪುಡಿ , ಮಾದರಿ ಸೋಡಿಯಂ ಕಾರ್ಬೋನೇಟ್ ದ್ರಾವಣ ಹಾಗೂ ತಿಳಿ ಗುಲಾಬಿ ಬಣ್ಣ ತಿರುಗಿದ ದ್ರಾವಣ ಆಗಿದ್ದು ಅವುಗಳನ್ನು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿರುತ್ತಾರೆ. ಅವುಗಳನ್ನು ಈಗಾಗಲೇ ಮು.ಮಾ. 2 ರಿಂದ 6 ಎಂದು ಗುರುತಿಸಲಾಗಿದೆ . ಬಾಕಿ ಮುದ್ದೆ ಮಾಲನ್ನು ಕುಮಟಾದ ಪ್ರವಾಸಿ ಮಂದಿರದಲ್ಲಿ ಟ್ರ್ಯಾಪ್ ಸಮಯದಲ್ಲಿ ಜಪ್ತು ಮಾಡಿದ್ದಾರೆ. ಅವುಗಳು ಗುಲಾಬಿ ಬಣ್ಣ ತಿರುಗಿರುವ ದ್ರಾವಣ , ಪ್ಯಾಂಟ್ , ಮಾದರಿ ದ್ರಾವಣ ಇರುವ ಬಾಟಲ್ ಆಗಿರುತ್ತವೆ. ಅವುಗಳನ್ನು ಈಗಾಗಲೇ ಮು.ಮಾ. 7 ರಿಂದ 10 ಎಂದು ಗುರುತಿಸಲಾಗಿದೆ . ಹಣವನ್ನು ಸಹ ಪ್ರವಾಸಿ ಮಂದಿರದಲ್ಲಿ ಜಪ್ತು ಮಾಡಿರುತ್ತಾರೆ.

ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದಲ್ಲಿ ಲಕೋಟೆಯಿಂದ ತೆಗೆದು ತೋರಿಸಿದ ಹಣ ಆಗ ಜಪ್ತು ಮಾಡಿದ ಹಣವೇ ಆಗಿರುತ್ತದೆ . ಅದನ್ನು ಹೆರವಟ್ಟಾದ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯ ಹತ್ತಿರ ಇರುವ ಗಿಡಗಂಟೆಗಳಿಂದ ವಶಪಡಿಸಿಕೊಳ್ಳಲಾಗಿದೆ . ಸದರಿ ಹಣವನ್ನು ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

ಪಾಟೀ ಸವಾಲನ್ನು ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ